REGISTERED WITH RNI NEW DELHI REG. N0.69683/97-Postal Registration No.RNP/KA/BGS/2259/2021-2023
Office of Posting: Bangalore PSO, Bangalore - 560026.; Date of Posting & Publishing Every Wednesday; Price Rs. 2 (Pages-8)

ಪಟ್ಟಣ ಸಹಕಾರ ಬ್ಯಾಂಕುಗಳ

# ವಾರ್ತಾ ಪತ್ರಿಕೆ

ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳದ ಅಧಿಕೃತ ವಾರಪತ್ರಿಕೆ

ಸಂಪುಟ : 28 । ಸಂಚಿಕೆ : 50 । ಮಾರ್ಚ್ 23, 2022 । ಬುಧವಾರ । ಪುಟಗಳು : 8 । ಬೆಲೆ : 2/-

## ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ 60 ಮಹನೀಯರಿಗೆ ಸಹಕಾರ ರತ್ನ ಪ್ರಶಸ್ತಿ ಪ್ರದಾನ



**ಬೆಂಗಳೂರು :** ಸಹಕಾರ ಎನ್ನುವುದು ಮನುಷ್ಯ ಜೀವನದ ಒಂದು ಭಾಗ. ಮನುಷ್ಯ ಏಕಾಂಗಿಯಾಗಿ ಬದುಕುವುದಕ್ಕೆ ಸಾಧ್ಯವಿಲ್ಲ. ಮನುಷ್ಯ ಸಂಘ ಜೀವಿಯಾದಾಗ ಸಹಕಾರ ಬಹಳ ಮುಖ್ಯ. ಸಹಕಾರದ ಮಹತ್ವ ತಿಳಿದುಕೊಂಡ್ರೆ ನಮ್ಮ ಬದುಕು ಸುಲಭ. ಇಲ್ಲದಿದ್ದರೆ ನಾವು ಪ್ರಗತಿ ಸಾಧಿಸಲು ಸಾಧ್ಯವಿಲ್ಲ ಎಂದು ಬೆಂಗಳೂರಿನಲ್ಲಿ ನಡೆದ ಸಹಕಾರ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನುಡಿದರು. ಅವರು ಸಹಕಾರ ರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಪುನೀತ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡುತ್ತಿದ್ದರು.

ಸಹಕಾರ ಕೇತ್ರ ಬಹಳ ವಿಶಾಲವಾಗಿ ಬೆಳೆದಿದೆ, ಮಹಿಳೆಯರು, ಅಸಂಘಟಿತ ವಲಯದ ನೌಕರರು ಇದರಲ್ಲಿ ಭಾಗವಹಿಸಬೇಕು. ಸಾಕಷ್ಟು ಮಹಿಳೆಯರ ಅಹಕಾರ ಸಂಘಗಳು ಇವೆ. ವಿವಿಧ ಉದ್ದೇಶ ಸಹಕಾರಿ ಮಹಿಳಾ ಸಂಘವನ್ನು  ಪ್ರತಿ ತಾಲೂಕಿನಲ್ಲಿ ಪ್ರಾರಂಭ ಮಾಡುತ್ತೇವೆ. ಸರ್ಕಾರದ ಕಡೆಯಿಂದ ಬಂಡವಾಳ ಹಾಕುತ್ತೇವೆ. ಮಹಿಳೆಯರು ಕೂಡ ಮುಂದಕ್ಕೆ ಬರಬೇಕು. ಸಹಕಾರಿ ಕ್ಷೇತ್ರ ಬೆಳೆಯಬೇಕು. ಸಹಕಾರ ಕ್ಷೇತ್ರ ಜೊತೆಗೆ ನಾನಿದ್ದೇನೆ, ಇನ್ನೂ ಉತ್ತಮ ಕೆಲಸ ಮಾಡಿ ಎಂದು ಮುಖ್ಯಮಂತ್ರಿಗಳು ನುಡಿದರು.

ನಂತರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಸಹಕಾರ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ 60 ಜನ ಮಹನೀಯರಿಗೆ ಸಹಕಾರ ರತ್ನ ಪ್ರಶಸ್ತಿ ಪ್ರದಾನ ಮಾಡಿದರು. ನಂತರ, ಸಚಿವ ಎಸ್ ಟಿ ಸೋಮಶೇಖರ್ ಅವರು ಮಾತನಾಡಿ, ಸಹಕಾರ ರತ್ನ ಪ್ರಶಸ್ತಿಗೆ ರಾಜ್ಯ ಮಟ್ಟದಲ್ಲಿ ಆಯ್ಕೆ ಸಮಿತಿ ಇದೆ. ಇದರಲ್ಲಿ ಕೃಷಿ ಸಚಿವರು, ಸಹಕಾರ ಮಹಾಮಂಡಳದ ಅಧ್ಯಕ್ಷರು, ಸಹಕಾರ ಇಲಾಖಾ ಪ್ರಧಾನ ಕಾರ್ಯದರ್ಶಿಯವರು, ಸಹಕಾರ ಸಂಘಗಳ ನಿಬಂಧಕರು ಮತ್ತು ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರು (ಸದಸ್ಯ ಕಾರ್ಯದರ್ಶಿ) ಇರುತ್ತಾರೆ ಎಂದು ಮಾಹಿತಿ ನೀಡಿದರು.

ಈವರೆಗೆ 140 ಜನ ಸಹಕಾರಿಗಳಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿದ್ದು, ಇದೊಂದು ಸಹಕಾರ ಚಳವಳಿಯ ಆರೋಗ್ಯಕರ ಬೆಳವಣಿಗೆಗೆ ನೀಡುವ ಪ್ರೋತ್ಸಾಹ, ಬೆಂಬಲ ಎಂದು ಭಾವಿಸಲಾಗಿದೆ. ಇದು ಭಾರತದ ಸಹಕಾರ ಚಳವಳಿಯಲ್ಲಿ ದಾಖಲಾರ್ಹವಾಗಿದೆ ಎಂದು ವಿವರಿಸಿದರು.

### ಸಮಾರಂಭದಲ್ಲಿ ಪುನೀತ್‌ಗೆ ಗೌರವ ಸಲ್ಲಿಸಿದ ಗಣ್ಯರು

ಆರ್ಥಿಕ ಸ್ವಾತಂತ್ರಕ್ಕೆ ಹೆಬ್ಬಾಗಿಲು ಎಂಬ ಆಶಯದೊಂದಿಗೆ ಸಹಕಾರ ಕ್ಷೇತ್ರಕ್ಕೆ ಒತ್ತು ನೀಡಿರುವ ರಾಷ್ಟ್ರಪಿತ

3ನೇ ಪುಟಕ್ಕೆ...

2 ಈ ವರ್ಷ ರಾಜ್ಯಗಳಿಗೆ ರೂ.53,600 ಕೋಟಿಗೂ ಹೆಚ್ಚು ಜಿಎಸ್‌ಟಿ ಪರಿಹಾರ ಬಿಡುಗಡೆ ಮಾಡಬೇಕಿದೆ : ನಿರ್ಮಲಾ ಸೀತಾರಾಮನ್
4 ನಾಡು ಮೆಚ್ಚಿದ ಜನನಾಯಕ, ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲರ 98ನೇ ಜನ್ಮ ದಿನಾಚರಣೆ
7 ನಿಮ್ಮ ಪ್ರಶ್ನೆ – ನಮ್ಮ ಉತ್ತರ

## ಅತ್ಮೀಯ ಸಹಕಾರಿಗಳೇ...



### ಸಹಕಾರ ಕ್ಷೇತ್ರ ಮಹಿಳಾ ಸಬಲೀಕರಣಕ್ಕೆ ಹೆಬ್ಬಾಗಿಲು

ಸರ್ಕಾರದ ಶೇ 90ರಷ್ಟು ಷೇರು ಬಂಡವಾಳದೊಂದಿಗೆ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲೂ ಮಹಿಳೆಯರಿಗಾಗಿ ವಿವಿಧೋದ್ದೇಶ ಸಹಕಾರಿ ಸಂಘಗಳನ್ನು ಆರಂಭಿಸಲಾಗುವುದು. ಸಹಕಾರ ರಂಗದ ಯಶಸ್ಸಿನಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆ ಮಹತ್ವದ್ದಾಗಿದೆ. ಸರ್ಕಾರ ಸಹಕಾರ ಕ್ಷೇತ್ರದಲ್ಲಿ ಔದ್ಯೋಗಿಕ ಕ್ರಾಂತಿ ಮಾಡಲು ನಿರ್ಧರಿಸಿದೆ. ಸಹಕಾರ ಕ್ಷೇತ್ರದೊಂದಿಗೆ ನಮ್ಮ ಸರ್ಕಾರವಿದೆ, ಅದ್ದರಿಂದ ಇನ್ನೂ ಹೆಚ್ಚಿನ ಪ್ರಗತಿಯಾಗಲಿ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಹಕಾರ ರತ್ನ ಪ್ರಶಸ್ತಿ ಸಮಾರಂಭದಲ್ಲಿ ಸಹಕಾರಿಗಳಾದ ನಮ್ಮಲ್ಲಿ ಹುರುಪು ತುಂಬಿದ್ದಾರೆ. ಈ ಮಾತುಗಳಿಗಾಗಿ ಮುಖ್ಯಮಂತ್ರಿಗಳನ್ನು ಅವರನ್ನು ನಾನು ಅಭಿನಂದಿಸುತ್ತೇನೆ.

ಇಂದು ಎಲ್ಲ ಕ್ಷೇತ್ರಗಳಲ್ಲೂ ಮಹಿಳೆಯರ ಪಾತ್ರ ತುಂಬಾ ಮಹತ್ವದಾಗಿದೆ. ಒಂದೆಡೆ ಸಂಸಾರವನ್ನು ಸಂಭಾಳಿಸಿಕೊಂಡು ಇನ್ನೊಂದೆಡೆ ಉದ್ಯೋಗ ಸ್ಥಳದಲ್ಲಿಯೂ ದಕ್ಷವಾಗಿ ಕಾರ್ಯ ನಿರ್ವಹಿಸುವ ಮಹಿಳೆಯ ಜಾಣ್ಮೆಗೆ ಎಣೆಯಿಲ್ಲ. ಮಹಿಳೆಗಿರುವ ಸ್ಥೈರ್ಯ, ಧೈರ್ಯಕ್ಕೆ ಸರಿಸಾಟಿಯಿಲ್ಲ. ಮಹಿಳೆಯರು ನಿರ್ವಹಿಸುವ ಅನೇಕ ಪಾತ್ರಗಳನ್ನು ಪುರುಷರಿಗೆ ನಿರ್ವಹಿಸಲು ಸಾಧ್ಯವೇ ಇಲ್ಲ. ಇಂದು ಕ್ರೀಡೆಯೂ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಮಹಿಳೆ ಪುರುಷರಿಗಿಂತ ಸಾಕಷ್ಟು ಮುಂದೆಯೇ ಇದ್ದಾಳೆ.

ಆದರೆ, ಮಹಿಳೆಗೆ ಸಲ್ಲಬೇಕಾದ ಅವಕಾಶಗಳನ್ನು ತಪ್ಪಿಸಲಾಗುತ್ತದೆ. ಕೇಂದ್ರ ಸರ್ಕಾರ ಒಂದೆಡೆ ಬೇಟಿ ಬಚಾವೋ ಬೇಟಿ ಪಡಾವೋ ರಾಷ್ಟ್ರೀಯ ಯೋಜನೆಗಳನ್ನು ರೂಪಿಸುತ್ತದೆ, ಇನ್ನೊಂದೆಡೆ ಮಹಿಳೆಯರಿಗೆ ಉನ್ನತ ಹುದ್ದೆ ನೀಡಲು ಕುಂಟು ನೆಪಗಳನ್ನು ಹೇಳುತ್ತದೆ. ಮಹಿಳೆಯರಿಗೆ ಉನ್ನತಾಧಿಕಾರ ನೀಡದಿರುವುದಕ್ಕೆ ಅವರುಗಳಿಗೆ ಕೌಟುಂಬಿಕ ಹೊಣೆಗಾರಿಕೆಗಳು ಬಹಳ ಇರುತ್ತವೆ ಎನ್ನುವ ಕುಂಟು ನೆಪಗಳನ್ನು ಮುಂದುಮಾಡಲಾಗುತ್ತದೆ. ಈ ಲಿಂಗ ತಾರತಮ್ಯವನ್ನು ತೊಡೆದು ಹಾಕಬೇಕಿದ್ದರೆ, ರಾಷ್ಟ್ರ ಮಟ್ಟದಲ್ಲಿ ಎಲ್ಲಾ ಕೇತ್ರಗಳನ್ನು ಒಳಗೊಂಡ ಒಂದು ಶಾಶ್ವತ ಮಹಿಳಾ ಆಯೋಗವನ್ನು ರಚಿಸುವ ಅಗ್ಯವಿದೆ.

ಹಾಗೆ ನೋಡುವುದಾದರೆ, ನಮ್ಮ ಸಹಕಾರ ಕ್ಷೇತ್ರ ಮಹಿಳಾ ಸಬಲೀಕರಣಕ್ಕೆ ಹೆಬ್ಬಾಗಿಲು ಎಂದು ನಾನು ಭಾವಿಸುವೆ. ನಮ್ಮ ಸಹಕಾರ ಕ್ಷೇತ್ರದಲ್ಲಿ ಮಹಿಳೆಯರ ಪಾತ್ರ ಕಡಮೆಯೇನಿಲ್ಲ ನಮ್ಮ ರಾಜ್ಯದಲ್ಲಿ ಸರಿಸುಮಾರು ಆರು ಸಾವಿರ ಮಹಿಳಾ ಸಹಕಾರ ಸಂಘಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಮಾಹಿತಿ ಇದೆ. ಅಲ್ಲದೇ ಅನೇಕ ಮಹಿಳಾ ಸಹಕಾರ ಬ್ಯಾಂಕುಗಳು ಆರ್ಥಿವಾಗಿ ಉತ್ತಮ ಪ್ರಗತಿಯ ಸಾಧಿಸಿವೆ. ಇದಕ್ಕೆ ಕಾರಣ, ಮಹಿಳೆಯರಲ್ಲಿ ಉಳಿತಾಯ ಮನೋಭಾವನೆ ಹೆಚ್ಚಿಗೆ ಇದ್ದು, ಸಹಕಾರ ಸಂಘಗಳ ಮೂಲಕ ಅನೇಕ ಮಹಿಳೆಯರು ಸ್ವ ಉದ್ಯೋಗ ಕೈಗೊಂಡು ಆರ್ಥಿಕವಾಗಿ ಸದೃಢರಾಗಿದ್ದಾರೆ, ಸ್ವಾವಲಂಬಿಗಳಾಗುತ್ತಿದ್ದಾರೆ. ಸಂಘಗಳಿಂದ ಪಡೆದ ಸಾಲವನ್ನು ಸಕಾಲಕ್ಕೆ ಮರು ಪಾವತಿಸುವಲ್ಲಿ ಪುರುಷರಿಗಿಂತ ಮಹಿಳೆಯರಲ್ಲಿ ಮುಂದೆ ಎನ್ನುವುದು ನನ್ನ ಸ್ವಾನುಭವದ ಮಾತು.

ನಮ್ಮ ರಾಜ್ಯದ ಅನೇಕ ಸಹಕಾರ ಬ್ಯಾಂಕುಗಳ ವಿವಿಧ ಅಧಿಕಾರದ ಹುದ್ದೆಗಳಲ್ಲಿ ಮಹಿಳೆಯರು ತಮ್ಮ ಸಾಮರ್ಥ್ಯ ತೋರುತ್ತಿದ್ದಾರೆ ಇದನ್ನು ನಾನು ಹೆಮ್ಮೆಯಿಂದ ಹೇಳಬಯಸುತ್ತೇನೆ. ಅಲ್ಲದೆ, ನಮ್ಮ ಸಹಕಾರ ಕ್ಷೇತ್ರ ಹೆಚ್ಚಿನ ಸಾಧನೆ ತೋರಬೇಕಿದ್ದರೆ, ಮಹಿಳೆಯರ ಭಾಗವಹಿಸುವಿಕೆ ಇನ್ನೂ ಹೆಚ್ಚಾಗಬೇಕಿದೆ, ಅವರು ಬರಲಿ, ಸಾಧಿಸಲಿ ನಾವು ಹೆಮ್ಮೆ ಪಡೋಣ.

▶▶ ಎಚ್.ಕೆ. ಪಾಟೀಲ
ಅಧ್ಯಕ್ಷರು

## 8th Batch
## ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ) ಕೋರ್ಸ್‌ಗೆ ಅರ್ಜಿ ಆಹ್ವಾನ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದಲ್ಲಿರುವ ಪಟ್ಟಣ ಸಹಕಾರ ಬ್ಯಾಂಕುಗಳ ಸಿಬ್ಬಂದಿಗಳಿಗೆ ಮೂರು ತಿಂಗಳ ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ (ಡಿಯುಸಿಬಿಎಂ) ಕೋರ್ಸ್‌ನ್ನು ಪ್ರಾರಂಭಿಸಿರುತ್ತದೆ. ಈಗಾಗಲೇ 6 ಬ್ಯಾಚ್‌ಗಳನ್ನು ಯಶಸ್ವಿಯಾಗಿ ಪೂರೈಸಿದ್ದು, 7ನೇ ಬ್ಯಾಚ್‌ನ ಪರೀಕ್ಷೆಗಳು ಸದ್ಯದಲ್ಲಿಯೇ ಜರುಗಲಿವೆ. ಈಗ 8ನೇ ಬ್ಯಾಚ್ ಡಿಪ್ಲೋಮಾ ಇನ್ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್ ಕೋರ್ಸ್‌ನ್ನು ಪ್ರಾರಂಭಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಈ ಕೋರ್ಸ್‌ಗೆ ಸಂಬಂಧಿಸಿದಂತೆ ಮಹಾಮಂಡಳವು ಬೆಂಗಳೂರು ಮತ್ತು ಬೆಳಗಾವಿಯಲ್ಲಿ ಸಂಪರ್ಕ ತರಗತಿಗಳನ್ನು ಮತ್ತು ಪರೀಕ್ಷಾ ಕೇಂದ್ರಗಳನ್ನು ಆಯ್ಕೆ ಮಾಡಿಕೊಂಡಿರುತ್ತದೆ. ಪ್ರಯುಕ್ತ, ತಮ್ಮ ಬ್ಯಾಂಕಿನ ಸಿಬ್ಬಂದಿಗಳನ್ನು ಸದರಿ ಕೋರ್ಸ್‌ಗೆ ನೋಂದಣಿ ಮಾಡಿಸುವಾಗ ಯಾವ ಪರೀಕ್ಷಾ ಕೇಂದ್ರವನ್ನು ಆಯ್ಕೆ ಮಾಡಿಕೊಂಡಿದ್ದೀರೆಂದು ಕಡ್ಡಾಯವಾಗಿ ನೋಂದಣಿ ಅರ್ಜಿಯಲ್ಲಿ ತಿಳಿಸಬೇಕು. ಸದರಿ ಕೋರ್ಸ್ ನೌಕರರ ಮುಂಬಡ್ತಿಗೆ ಅನುಕೂಲವಾಗುತ್ತದೆ.

ಅರ್ಜಿಯನ್ನು ಭರ್ತಿ ಮಾಡಿ ಮಹಾಮಂಡಳಕ್ಕೆ ಕಳುಹಿಸಿಕೊಡಲು ಕೊನೆಯ ದಿನಾಂಕ : 25.03.2022 ಆಗಿರುತ್ತದೆ. ಆದ್ದರಿಂದ ಕೊನೆಯ ದಿನದವರೆಗೆ ಕಾಯದೆ ಬೇಗನೆ ಅರ್ಜಿಗಳನ್ನು ಭರ್ತಿಮಾಡಿ ಮಹಾಮಂಡಳಕ್ಕೆ ಕಳುಹಿಸಿಕೊಡಬೇಕು. ಪ್ರತಿ ಅಭ್ಯರ್ಥಿಗೆ ಕೋರ್ಸ್‌ನ ಶುಲ್ಕ ರೂ.4,500 + (ಜಿಎಸ್‌ಟಿ) 810 = ಒಟ್ಟು ರೂ. 5,310/–ಗಳನ್ನು ನಿಗದಿಪಡಿಸಲಾಗಿದೆ.

ಈಗಾಗಲೇ ತಮ್ಮ ಬ್ಯಾಂಕಿನ ಇ–ಮೇಲ್ ವಿಳಾಸಕ್ಕೆ ಕೋರ್ಸ್‌ಗೆ ಸಂಬಂಧಿಸಿದ ಅರ್ಜಿ ಫಾರಂ ಮತ್ತು ವಿವರಗಳನ್ನು ಕಳುಹಿಸಿಕೊಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾಮಂಡಳದ ಸಂಪರ್ಕಾಧಿಕಾರಿ ಶ್ರೀ ಎನ್. ರಮೇಶ್ (9448003167) ಮತ್ತು ಶ್ರೀ ಶ್ರೀನಿವಾಸ್ ಹೆಚ್.ಸಿ. (9110642779) ಇವರುಗಳನ್ನು ಸಂಪರ್ಕಿಸಬಹುದಾಗಿದೆ.



...ನೇ ಪುಟದಿಂದ

ಮಹಾತ್ಮ ಗಾಂಧಿ, ಗ್ರಾಮೀಣಾಭಿವೃದ್ಧಿಗೆ ಒತ್ತು ನೀಡಿದ್ದ ರಾಷ್ಟ್ರದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರೂ ಅವರುಗಳ ಸೇವೆಯನ್ನು ಸ್ಮರಿಸಲಾಯಿತು.

ರಾಷ್ಟ್ರದ ಪ್ರಥಮ ಕೃಷಿ ಪತ್ತಿನ ಸಹಕಾರ ಸಂಘದ ಸ್ಥಾಪಕರಾದ ಸಹಕಾರಿ ಪಿತಾಮಹ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರವರನ್ನು ಹಾಗೂ ಕ್ಷೀರ ಕ್ರಾಂತಿಯ ಪಿತಾಮಹ ವರ್ಗೀಸ್ ಕುರಿಯನ್ ಅವರನ್ನು ಸ್ಮರಿಸಲಾಯಿತು.

ಸಮಾರಂಭದಲ್ಲಿ ಸಹಕಾರ ಮಹಾಮಂಡಳ ಅಧ್ಯಕ್ಷ ಜಿ.ಟಿ.ದೇವೇಗೌಡ, ವಿವಿಧ ಸಹಕಾರ ಮಂಡಳಿಗಳ ಪದಾಧಿಕಾರಿಗಳು ಮತ್ತು ಇತರರು ಉಪಸ್ಥಿತರಿದ್ದರು.

## ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಹಾಲಿ ಹಾಗೂ ಮಾಜಿ ನಿರ್ದೇಶಕರುಗಳು



ಶ್ರೀ ಹೆಚ್.ಸಿ. ಕೃಷ್ಣ



ಶ್ರೀ ರಮೇಶ್ ಬಾಬು



ಶ್ರೀ ರಾಜಶೇಖರ್ ಸಿದ್ದಪ್ಪ ಹಾವಣಗಿ



ಡಾ.ಬೃಹದಾಂಬ



ಶ್ರೀ ಆವಲಹಳ್ಳಿ ಚಂದ್ರಪ್ಪ

ಇದೇ ಸಮಾರಂಭದಲ್ಲಿ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಹೆಚ್.ಸಿ. ಕೃಷ್ಣ, ಶ್ರೀ ರಮೇಶ್ ಬಾಬು, ಶ್ರೀ ರಾಜಶೇಖರ್ ಸಿದ್ದಪ್ಪ ಹಾವಣಗಿ, ಮಾಜಿ ನಿರ್ದೇಶಕರಾದ ಡಾ.ಬೃಹದಾಂಬ ಹಾಗೂ ಬೆಂಗಳೂರಿನ ಪ್ರತಿಷ್ಠಿತ ಸಹಕಾರ ಬ್ಯಾಂಕ್ ಆದ ದಿ ಬೆಂಗಳೂರು ಸಿಟಿ ಕೋ ಆಪರೇಟೀವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಆವಲಹಳ್ಳಿ ಚಂದ್ರಪ್ಪ ಅವರುಗಳಿಗೆ ಸಹಕಾರ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಬೆಂಗಳೂರಿನ ಜನತಾ ಸೇವಾ ಕೋ ಆಪರೇಟೀವ್ ಬ್ಯಾಂಕ್ ಅನ್ನು ಅತ್ಯುತ್ತಮ ಸಹಕಾರ ಬ್ಯಾಂಕ್ ಎಂದು ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಪುರಸ್ಕೃತರನ್ನು ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀ ಎಚ್.ಕೆ.ಪಾಟೀಲರು, ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯ ಹಾಗೂ ಮಹಾಮಂಡಳದ ನಿರ್ದೇಶಕ ಮಂಡಳಿಯ ಸದಸ್ಯರುಗಳು ಅಭಿನಂದಿಸಿರುತ್ತಾರೆ.

## ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್‌ನ ಅಧ್ಯಕ್ಷರಾಗಿ ಶ್ರೀ ಎಸ್.ಆರ್. ಲಕ್ಷ್ಮೀಕಾಂತ ರೆಡ್ಡಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಎಲ್.ಇ. ಶ್ರೀನಿವಾಸ ಬಾಬು ಆಯ್ಕೆ

**ಚಿತ್ರದುರ್ಗ** : ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ ಇದರ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಶ್ರೀ ಎಸ್.ಆರ್.ಲಕ್ಷ್ಮೀಕಾಂತ ರೆಡ್ಡಿಯವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಎಲ್.ಇ. ಶ್ರೀನಿವಾಸ ಬಾಬು ಹಾಗೂ ನಿರ್ದೇಶಕರುಗಳಾಗಿ ಶ್ರೀ ಜೆ.ವಿ. ಮುಕುಂದರಾವ್, ಶ್ರೀ ರಘುರಾಮ ರೆಡ್ಡಿ, ಶ್ರೀ ಎನ್. ಜಯಣ್ಣ, ಶ್ರೀ ಪಿ.ಎಲ್. ಸುರೇಶ ರಾಜು, ಶ್ರೀ ಎಸ್. ಮಂಜುನಾಥ, ಶ್ರೀಮತಿ ಎಸ್. ಇಂದ್ರಮ್ಮ, ಶ್ರೀಮತಿ ಸಿ. ಸುಜಾತ, ಶ್ರೀ ಜಿ. ರಾಜಾನಾಯ್ಕ, ಶ್ರೀ ಡಿ. ಪ್ರಕಾಶ, ಶ್ರೀ ಜೆ. ಸುರೇಶ, ಶ್ರೀ ಟಿ.ಹೆಚ್. ರಾಜಪ್ಪ ಆಯ್ಕೆಯಾಗಿರುತ್ತಾರೆ.

# ನಾಡು ಮೆಚ್ಚಿದ ಜನನಾಯಕ, ಸಹಕಾರ ರಂಗದ ಭೀಷ್ಮ ಕೆ.ಎಚ್. ಪಾಟೀಲರ 98ನೇ ಜನ್ಮ ದಿನಾಚರಣೆ



**ಬೆಂಗಳೂರು** : ಕೆ.ಎಚ್. ಪಾಟೀಲರ ಅಭಿಮಾನಿಗಳ ಬಳಗ ಹಾಗೂ ಬೆಂಗಳೂರು ನಗರದ ವಿವಿಧ ಸಹಕಾರ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಬೆಂಗಳೂರಿನ ಗಾಂಧೀ ಭವನದಲ್ಲಿ ದಿನಾಂಕ : 16.03.2022ರಂದು ನಾಡು ಮೆಚ್ಚಿದ ಜನನಾಯಕ, ಸಹಕಾರ ರಂಗದ ಭೀಷ್ಮ, ಉತ್ತರ ಕರ್ನಾಟಕದ ಹುಲಿ ಕೆ.ಎಚ್. ಪಾಟೀಲರ 98ನೇ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.

ಈ ಸಮಾರಂಭದ ಉದ್ಘಾಟನೆಯನ್ನು ವಿಧಾನಪರಿಷತ್ ಮಾನ್ಯ ಸಭಾಪತಿಗಳಾದ ಶ್ರೀ ಬಸವರಾಜ ಎಸ್. ಹೊರಟ್ಟಿಯವರು ನೆರವೇರಿಸಿ ಮಾತನಾಡಿ ಕೆ.ಎಚ್. ಪಾಟೀಲರು ಮಾತನಾಡುವಾಗ ನೇರವಾಗಿ ಮಾತನಾಡುವವರು. ಅವರು ತಮ್ಮ ಕರ್ತವ್ಯದ ಬಗ್ಗೆ ಅಪಾರವಾದ ಕಾಳಜಿ ಉಳ್ಳವರು. ಸತ್ತು ಬದುಕಿದವರು ಕೆ.ಎಚ್. ಪಾಟೀಲರು. ಅಂತವರ ಅನುಕರಣೆಯನ್ನು ನಾವು ಮಾಡಬೇಕು. ಇಂತಹ ಮಹನೀಯರ ಜನ್ಮದಿನಾಚರಣೆ ಸಮಾರಂಭ ಉದ್ಘಾಟಿಸುತ್ತಿರುವುದು ನನ್ನ ಪೂರ್ವಜನ್ಮದ ಪುಣ್ಯ. ಅವರಂತಹ ಮಹಾನ ವ್ಯಕ್ತಿಗಳ ಸ್ಮರಣೆ ಮಾಡುವ ಅಭಿಮಾನದಿಂದ ಇಷ್ಟೊಂದು ಜನ ಸೇರಿದ್ದೀರಿ. ಕೆ.ಎಚ್. ಪಾಟೀಲರಂತಹ ಮಹಾನ್ ವ್ಯಕ್ತಿಗಳು ಸೂರ್ಯ–ಚಂದ್ರ ಇರುವವರೆಗೆ ಸ್ಮರಣೆಯಲ್ಲಿರುತ್ತಾರೆ ಎಂದು ಹೇಳಿದರು. ಮೈಸೂರು ರಾಜ್ಯ ಎಂಬ ಹೆಸರಿನ ಬದಲಾಗಿ ರಾಜ್ಯಕ್ಕೆ ಕರ್ನಾಟಕವೆಂದು ಹೊಸದಾಗಿ ನಾಮಕರಣ ಮಾಡುವ ಸಂದರ್ಭದಲ್ಲಿ ವಿಧಾನ ಪರಿಷತ್‌ನಲ್ಲಿ ಈ ಪ್ರಸ್ತಾವನೆಯನ್ನು ಸಲ್ಲಿಸಿದವರೇ ಕೆ.ಎಚ್. ಪಾಟೀಲರು ಎಂದು ಹೇಳಿದರು.

ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾದ ಶ್ರೀ ಬಿ.ಕೆ. ಹರಿಪ್ರಸಾದ್ ಅವರು ಭಾವಚಿತ್ರ ಅನಾವರಣಗೊಳಿಸಿ ಮಾತನಾಡಿ ಕೆ.ಎಚ್. ಪಾಟೀಲರು ರಾಜಕಾರಣದಲ್ಲಿ ನಮಗೆಲ್ಲ ಪ್ರೇರಣೆಯಾಗಿದ್ದರು. ಅಂದು ಸೇವಾದಳದ ಅಧ್ಯಕ್ಷರಾಗಿ ಕೆಲಸ ಮಾಡಿದವರು. ಆ ಸಂದರ್ಭಗಳಲ್ಲಿನ ಹಲವಾರು ಭಾವನಾತ್ಮಕ ಘಟನೆಗಳನ್ನು ಸ್ಮರಿಸಿದರು. ಬಳಿಕ ಸೇವಾ ದಳದ ಅಧಿಕಾರವನ್ನು ಅವರು ನನಗೆ ಹಸ್ತಾಂತರಿಸಿದ್ದರು. ಕೆ.ಎಚ್. ಪಾಟೀಲರ ಜೀವನಶೈಲಿಯನ್ನು ಅನುಕರಣೆ ಮಾಡಲು ಅವರ ಸ್ಮರಣೆ ಮಾಡಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಧಾನಪರಿಷತ್ ಮಾಜಿ ಸಭಾಪತಿಗಳಾದ ಶ್ರೀ ಬಿ.ಎಲ್. ಶಂಕರ್ ಮಾತನಾಡಿ ಧಾರವಾಡದಲ್ಲಿ ನಾನು ಜೆಎಸ್‌ಎಸ್ ಕಾಲೇಜಿನಲ್ಲಿ ಬಿಎಸ್‌ಸಿ ಓದುತ್ತಿರುವಾಗ ನಾನು ಎಚ್.ಕೆ. ಪಾಟೀಲರು ಸಹಪಾಠಿಗಳು. ಅಂದು ನಾನು ಕೆ.ಎಚ್. ಪಾಟೀಲರ ಪ್ರಭಾವಕ್ಕೆ ಒಳಗಾದವನು ನಾನು ಒಬ್ಬ ಕೃಷಿಕ ಹಾಗೂ ಕಾಫಿ ಬೆಳೆಗಾರ. ಅವರು ಹೊಂದಿದ್ದ ರೈತಪರ, ಜನಪರ ಕಾಳಜಿಗಳನ್ನು ಈಗೀನ ಪ್ರಸ್ತುತ ರಾಜಕಾರಣಿಗಳು ಅನುಸರಿಸಬೇಕೆಂದರು.

ಹಿರಿಯ ಚಿಂತಕ ಪ್ರೊ. ಜಿ.ಬಿ. ಶಿವರಾಜ ಮಾತನಾಡಿ ಕೆ.ಎಚ್. ಪಾಟೀಲರಂತಹ ಗಣ್ಯ ವ್ಯಕ್ತಿಗಳನ್ನು ಸ್ಮರಿಸುವುದು, ಅವರ ಬದುಕು, ಮಾರ್ಗ ಸಿದ್ಧಾಂತಗಳನ್ನು ಅನುಸರಿಸುವುದು ಮುಂದೆ ನಮಗೆ ಅದು ದಾರಿದೀಪವಾಗುತ್ತದೆ. ಕೆ.ಎಚ್. ಪಾಟೀಲರು ಗಾಂಧೀಜಿಯವರ, ವಿವೇಕಾನಂದರ ಚಿಂತನೆಗಳನ್ನು ನೋಡಿ ಬೆಳೆದವರು. ಕೆ.ಎಚ್. ಪಾಟೀಲರ ಆದರ್ಶದ ಬದುಕನ್ನು ಇಂದಿನ ಪೀಳಿಗೆಗೆ ತಿಳಿಸಬೇಕು. ಸಹಕಾರ ತತ್ವದಿಂದಲೇ ಅವರು ಮುನ್ನಡೆದವರು. ಜನಪರ ದೂರದೃಷ್ಟಿಯ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದರು. ಕೆ.ಎಚ್. ಪಾಟೀಲರದ್ದು ಹೋರಾಟ, ಸಂಘರ್ಷಗಳಿಂದ ಕೂಡಿದ, ಸಾಹಸಮಯ ಬದುಕು. "ಮಾಡಬಲ್ಲವರು ಮಾಡುತ್ತಾರೆ. ಮಾಡಲರಿಯದವರು ಮಾತನಾಡುತ್ತಾರೆ' ಎನ್ನುವಲ್ಲಿ ಮಾಡಬಲ್ಲವರು ಕೆ.ಎಚ್.ಪಾಟೀಲರು. ಅವರು ವ್ಯವಹಾರಿಕ ಅರ್ಥದಲ್ಲಿ ರಾಜಕಾರಣಿಯಾಗಿರಲಿಲ್ಲ. ಅವರೊಬ್ಬ ದಾರ್ಶನಿಕ ಧುರೀಣರಾಗಿದ್ದರು. "ರಾಜ–ಕಾರಣಿ ಮುಂದಿನ ಚುನಾವಣೆ ಬಗ್ಗೆ ಯೋಚಿಸಿದರೆ, ದಾರ್ಶನಿಕ ಮುಂದಿನ ಜನಾಂಗದ ಬಗ್ಗೆ ಯೋಚಿಸುತ್ತಾನೆ" ಎನ್ನುವ ಜಾರ್ಜ್ ಬರ್ನಾಡ್ ಷಾ ಅವರ ಮಾತಿಗೆ ಉದಾಹರಣೆಯಾಗಿದ್ದವರು. ಅವರು ಸಹಕಾರ ಕ್ಷೇತ್ರಕ್ಕೆ ನೀಡಿದ



ಕೊಡುಗೆ ಅಪಾರ ಎಂದರು. ಅವರ ಕೊಡುಗೆಗಳನ್ನು ಭವಿಷ್ಯದ ಜನಾಂಗ ಅರ್ಥಮಾಡಿಕೊಳ್ಳಲು ಕೆ.ಎಚ್.ಪಾಟೀಲರ ಮ್ಯೂಸಿಯಂನ್ನು ಗದಗನಲ್ಲಿ ಮಾಡಿದರೆ ಅವರ ಆದರ್ಶಗಳು ಮುಂದಿನ ಪೀಳಿಗೆಗೆ ಅನುಕರಣೀಯವಾಗಲಿವೆ.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಅಧ್ಯಕ್ಷರಾದ ಡಾ॥ ವೂಡೆ ಪಿ.ಕೃಷ್ಣರವರು ಇದು ಒಂದು ಅಪರೂಪದ ಕಾರ್ಯಕ್ರಮ ಅಂತಾ ನಾನು ಭಾವಿಸಿರುವೆ. ಸಹಕಾರದಿಂದ ಏನನ್ನಾದರೂ ಸಾಧಿಸಬಹುದು. ಸಾಮಾಜಿಕ ಬದಲಾವಣೆಯನ್ನು ತರಬಹುದು. ಈ ದೇಶದ ಕಟ್ಟಕಡೆಯ ವ್ಯಕ್ತಿಗೂ ಕೂಡ ದನಿಯನ್ನು ಕೊಡುವಂತಹದು ಸಹಕಾರ ತತ್ವದಲ್ಲಿದೆ ಎಂದವರು ಮಹಾತ್ಮಾ ಗಾಂಧೀಜಿಯವರು. ಅಂತಹ ಸಹಕಾರ ಕ್ಷೇತ್ರದಲ್ಲಿ ನಮ್ಮ ಇಡೀ ನಾಡಿಗೆ ಶಕ್ತಿ ತುಂಬಿದಂತವರು ಕೆ.ಎಚ್.ಪಾಟೀಲರು. ರಚನಾತ್ಮಕ ಕಾರ್ಯದಲ್ಲಿ ತೊಡಗಿದ್ದರು. ಸಹಕಾರಿ ತತ್ವಗಳನ್ನು ಅದರ ಫಲವನ್ನು ಜನಸಾಮಾನ್ಯರ ಬಾಗಿಲವರೆಗೆ ತಂದವರು. ಸಹಕಾರ ರಂಗದಲ್ಲಿ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು. ಮೇರು ವ್ಯಕ್ತಿತ್ವದ ವ್ಯಕ್ತಿಯವರು, ಸೇವಾ ದಳವನ್ನು ಕಟ್ಟಿದಂತವರು. ಕೆ.ಎಚ್.ಪಾಟೀಲರು ಕಟ್ಟಿ ಬೆಳೆಸಿದ ಸಂಸ್ಥೆಗಳು ಇಂದು ನಮ್ಮ ಕಣ್ಣೆದುರಿಗಿವೆ.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವಿಧಾನಪರಿಷತ್ ಮಾಜಿ ಸಭಾಪತಿಗಳಾದ ಶ್ರೀ ವಿ.ಆರ್. ಸುದರ್ಶನ್‌ರವರು ಮಾತನಾಡಿ ಹುಲಕೋಟಿಯ ಸರಪಂಚರಾಗಿ ಸಾರ್ವಜನಿಕ ಜೀವನ ಪ್ರವೇಶಿಸಿದ ಕೆ.ಎಚ್.ಪಾಟೀಲರು, ಶಾಸಕರಾಗಿ, ಸಚಿವರಾಗಿ, ಸಹಕಾರಿ ಭೀಷ್ಮರಾಗಿ ಬೆಳೆದು ಸಾಧಿಸಿದ ಕೀರ್ತಿ ಅಪಾರ. ಕನ್ನಡ ನಾಡು ಕಂಡ ಬಲು ಅಪರೂಪದ ರಾಜಕಾರಣಿ. ಕೆ.ಎಚ್.ಪಾಟೀಲರು ಕಲಿತಿದ್ದು ಕಡಿಮೆ, ಸಾಧಿಸಿದ್ದು ಅಪಾರ. ಪ್ರತಿಭೆಯಲ್ಲಿ, ಪಾಂಡಿತ್ಯದಲ್ಲಿ, ಸಂಘಟನಾ ಚಾತುರ್ಯದಲ್ಲಿ, ಆಡಳಿತ ಕೌಶಲ್ಯದಲ್ಲಿ, ಲೋಕಾನುಭವದಲ್ಲಿ, ಪರೋಪಕಾರದಲ್ಲಿ, ಪ್ರಗತಿಪರ ಮನೋಭಾವದಲ್ಲಿ, ಬಡವರ ಸೇವೆಯಲ್ಲಿ, ಕರ್ತವ್ಯ ನಿಷ್ಠೆಯಲ್ಲಿ, ವಾಗ್ಮೀಯತೆಯಲ್ಲಿ, ಎಲ್ಲಕ್ಕೂ ಹೆಚ್ಚಾಗಿ ಸಹಕಾರ ತತ್ವದಲ್ಲಿ ಅವರು ಹೊಂದಿದ್ದ ವಿಶ್ವಾಸ ಅಚಲ. ಆ ಕಾಲದಲ್ಲೇ ಎಪಿಎಂಸಿ ಸಂಸ್ಥೆಗಳು ಹೇಗೆ ಇರಬೇಕು ಎನ್ನುವ ಪ್ರಯತ್ನ ಮಾಡಿದ್ದವರು. ಸಹಕಾರಿ ಕ್ಷೇತ್ರ ಸದೃಢವಾಗಬೇಕಾದರೆ ಅವರ ನೆನಪಿನಲ್ಲಿ ಸರ್ಕಾರಿ ಆಚರಣೆಯಾಗಲಿ ಎಂದರು.

ಸಮಾರಂಭದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಗಾಂಧೀವಾದಿ ಶ್ರೀಮತಿ ಚೆನ್ನಮ್ಮ ಹಳ್ಳಿಕೇರಿ, ವಿಧಾನಪರಿಷತ್ ಸದಸ್ಯರಾದ ಶ್ರೀ ಪ್ರಕಾಶ್ ರಾಥೋಡ್, ಶಾಸಕರುಗಳಾದ ಶ್ರೀ ಶ್ರೀನಿವಾಸ್ ಮಾನೆ, ಶ್ರೀ ಮಹಾಂತೇಶ ಕೌಜಲಗಿ, ಮಾಜಿ ಶಾಸಕರಾದ ಎಸ್.ಜಿ. ನಂಜಯ್ಯನಮಠ, ಕೆ.ಎಚ್.ಪಾಟೀಲರ ಅಭಿಮಾನಿ ಬಳಗದ ಸದಸ್ಯರುಗಳಾದ ಶ್ರೀ ದೀಪಕ ಎಂ. ಪಾಟೀಲ, ಶ್ರೀ ರುದ್ರೇಗೌಡ, ಶ್ರೀ ರವಿಚಂದ್ರರಡ್ಡಿ, ಶ್ರೀ ಪಿ.ಎಲ್. ವೆಂಕಟರಾಮರೆಡ್ಡಿ, ಶ್ರೀ ಚಂದ್ರಮೌಳಿ ಎಸ್., ಶ್ರೀ ಜಯಸಿಂಹ, ಶ್ರೀ ವಸಂತ ರಾಜಪುರೋಹಿತ, ಶ್ರೀ ಸಂದೀಪ ಬೆಳಗಲಿ, ಶ್ರೀ ಪುಂಡಲೀಕ ಎನ್. ಕೇರೂರೆ, ಶ್ರೀ ಎಸ್.ಎಸ್. ಬಣಕಾರ, ಶ್ರೀ ಕೃಷ್ಣ ಉದಪುಡಿ, ಶ್ರೀ ಮೋಹನ ಗದ್ದಿಗೌಡರ, ಡಾ॥ ಸುರೇಶ ನಾಡಗೌಡ, ಡಾ॥ ಶಿವಪುತ್ರ ಬಾಬುರಾವ, ಶ್ರೀ ಲಕ್ಷ್ಮೀಕಾಂತ ಜೋಶಿ, ಶ್ರೀ ಶ್ರೀಕಾಂತ ಅಸುಂಡಿ ಮತ್ತಿತರರು ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಶ್ರೀಮತಿ ಶ್ರೀವಿದ್ಯಾ ರವರು ಪ್ರಾರ್ಥಿಸಿದರು. ಕೆ.ಎಚ್. ಪಾಟೀಲರ ಅಭಿಮಾನಿ ಬಳಗದ ಕಾರ್ಯದರ್ಶಿಗಳಾದ ಡಾ॥ ಕೆ. ದಿವ್ಯಾನಂದರವರು ಅತಿಥಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ರೇವಯ್ಯ ಒಡೆಯರ್ ನಿರೂಪಿಸಿದರು. ಕೊನೆಯಲ್ಲಿ ಕೆ.ಎಚ್.ಪಾಟೀಲರ ಅಭಿಮಾನಿ ಬಳಗದ ಸದಸ್ಯ ಡಾ। ಲತೀಫ್ ಎಸ್. ಕುನ್ನಿಭಾವಿ ವಂದನಾರ್ಪಣೆ ಸಲ್ಲಿಸಿದರು.

# ಕೇಂದ್ರ ಸರಕಾರದ ಪ್ರಧಾನಮಂತ್ರಿ ಸ್ವನಿಧಿ ಯೋಜನೆ : ಅಡಮಾನ ಇಲ್ಲದೆ ರೂ.20,000 ಸಾಲ ಲಭ್ಯ

**ನವದೆಹಲಿ :** ಸಣ್ಣ ವ್ಯಾಪಾರಿಗಳಿಗೆ ತಮ್ಮ ವ್ಯಾಪಾರಕ್ಕೆ ಆರ್ಥಿಕ ನೆರವು ಒದಗಿಸುವ ಸಲುವಾಗಿ ಕೇಂದ್ರ ಸರಕಾರ ಪ್ರಧಾನ ಮಂತ್ರಿ ಸ್ವನಿಧಿ ಯೋಜನೆ ಆರಂಭಿಸಿದೆ. ಈ ಯೋಜನೆಯನ್ನು ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯವು ಅನುಷ್ಠಾನಗೊಳಿಸುತ್ತಿದೆ. ರಸ್ತೆಬದಿ ವ್ಯಾಪಾರಿಗಳಿಗೆ ಆರ್ಥಿಕ ನೆರವು ನೀಡುವ ಈ ಯೋಜನೆಗೆ 'ಪ್ರಧಾನ ಮಂತ್ರಿ ಬೀದಿ ವ್ಯಾಪಾರಿಗಳ ಆತ್ಮನಿರ್ಭರ್ ನಿಧಿ' (ಪಿಎಂ ಸ್ವನಿಧಿ) ಎಂದು ಹೆಸರಿಸಲಾಗಿ. ಈ ಯೋಜನೆಯಡಿ ಅರ್ಹರಾಗಿರುವವರು ಯಾವುದೇ ಅಡಮಾನವಿಲ್ಲದೆ ಸಾಲಕ್ಕಾಗಿ ಅರ್ಜಿ ಸಲ್ಲಿಸಬಹುದು. ರೂ.10,000 ಆರಂಭಿಕ ಸಾಲ ತೆಗೆದುಕೊಳ್ಳಬಹುದು. ಈ ಹಣವನ್ನು ಒಂದು ವರ್ಷದೊಳಗೆ ಮರುಪಾವತಿ ಮಾಡಬೇಕು. ಅಧಿಕೃತ ವೆಬ್‌ಸೈಟ್ **https://pmsvanidhi.mohua.gov.in/**

**ಸಾಲಕ್ಕೆ ಅರ್ಜಿ ಸಲ್ಲಿಸುವುದು ಹೇಗೆ? :** ಪ್ರಧಾನಮಂತ್ರಿ ಸ್ವಾನಿಧಿ ಯೋಜನೆಯಡಿ ಸಾಲ ಪಡೆಯಲು ಬಯಸುವವರು ನೇರವಾಗಿ ಪ್ರಧಾನಮಂತ್ರಿ ಸ್ವನಿಧಿ ವೆಬ್‌ಸೈಟ್‌ಗೆ ಹೋಗಬೇಕು. ಅಲ್ಲಿ ನೀವು ಸಾಲಕ್ಕಾಗಿ ನೇರವಾಗಿ ಅರ್ಜಿ ಸಲ್ಲಿಸಬಹುದು. ಇದಲ್ಲದೆ, ಸಾಮಾನ್ಯ ಸೇವಾ ಕೇಂದ್ರಗಳಲ್ಲೂ ಅರ್ಜಿ ಸಲ್ಲಿಸಬಹುದು. **PM** ಸ್ವನಿಧಿ ವೆಬ್‌ಸೈಟ್‌ಗೆ ಭೇಟಿ ನೀಡಿ. ಅಲ್ಲಿ 10 ಸಾವಿರ ರೂಪಾಯಿ ಸಾಲ ಪಡೆಯುವ ಅರ್ಜಿ ಲಭ್ಯವಿದೆ. ನೀವು ಅದರ ಮೇಲೆ ಕ್ಲಿಕ್ ಮಾಡಿ, ಅಗತ್ಯ ಮಾಹಿತಿ ಭರ್ತಿ ಮಾಡಿ ಸಾಲಕ್ಕೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಿದ ನಂತರ ಅರ್ಜಿಯ ಸ್ಟೇಟಸ್‌ಪರಿಶೀಲಿಸುವ ಆಯ್ಕೆಯೂ ಇದೆ.

**ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ :** ಪಿಎಂ ಸ್ವಾನಿಧಿ ಯೋಜನೆಯಡಿ ಸಾಲ ಪಡೆಯಲು ಬಯಸುವವರು ಮೊದಲು ಪಿಎಂ ಸ್ವಾನಿಧಿ ವೆಬ್‌ಸೈಟ್‌ಗೆ ಹೋಗಬೇಕು.

- https://pmsvanidhi.mohua.gov.in/ ಲಿಂಕ್ ಮೂಲಕ ವೆಬ್‌ಸೈಟ್‌ಗೆ ಭೇಟಿ ನೀಡಿ.
- ನಂತರ ನೀವು ಕೆಲವು ಆಯ್ಕೆಗಳನ್ನು ನೋಡುತ್ತೀರಿ. ರೂ.10,000 ಸಾಲ, ರೂ.20,000 ಸಾಲ ಮತ್ತು ಸಾಲದ ಸ್ಟೇಟಸ್ ಹೀಗೆ ಹಲವು ಆಯ್ಕೆಗಳಿವೆ. ರೂ.10,000 ಅಥವಾ ರೂ.20,000 ಸಾಲದ ಬಟನ್ ಆಯ್ಕೆ ಮಾಡಿ.
- ಹೊಸ ವಿಂಡೋ ತೆರೆಯುತ್ತದೆ. ನಿಮ್ಮ ಆಧಾರ್ ಸಂಖ್ಯೆ ಅಥವಾ ಮೊಬೈಲ್ ಸಂಖ್ಯೆಯನ್ನು ನೀವು ನಮೂದಿಸಬೇಕು.
- ಈಗ ನೀವು ಒಟಿಪಿ ಪಡೆಯುತ್ತೀರಿ. ಒಟಿಪಿ ನಮೂದಿಸಿದ ನಂತರ ಅಗತ್ಯ ದಾಖಲೆಗಳನ್ನು ಒದಗಿಸಬೇಕು. ಈ ಮೂಲಕ ಅರ್ಜಿ ಸಲ್ಲಿಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ. ಈ ಸಾಲ ಪಡೆಯಲು ಮಾರಾಟಗಾರರ ಗುರುತಿನ ಚೀಟಿ ಅಗತ್ಯವಿದೆ.
- ಮೊದಲಿಗೆ ರೂ.10,000 ಸಾಲ ಪಡೆದು ಮರು ಪಾವತಿಸಿದವರು ಮಾತ್ರವೇ ರೂ.20,000 ಸಾಲ ಪಡೆಯಬಹುದು.

**ಇವು ಸಾಲದ ಅರ್ಹತೆಗಳು :** ನೀವು ಈ ಯೋಜನೆಯಡಿ ಸಾಲಕ್ಕೆ ಅರ್ಜಿ ಸಲ್ಲಿಸಲು ಬಯಸುವುದಾದರೆ, ಈ ಅರ್ಹತೆಗಳನ್ನು ಹೊಂದಿರಬೇಕು. ಎಲ್ಲಾ ಬೀದಿ ಬದಿ ವ್ಯಾಪಾರಿಗಳು ಸಾಲಕ್ಕಾಗಿ ಅರ್ಜಿ ಸಲ್ಲಿಸಬಹುದು. ಕೊರೊನಾ ವೈರಸ್ ಬೀದಿ ಬದಿ ವ್ಯಾಪಾರಿಗಳ ಮೇಲೆ ತೀವ್ರ ಪರಿಣಾಮ ಬೀರಿದೆ ಎಂದು ಹೇಳಬಹುದು. ಹೀಗಾಗಿ ಅವರನ್ನು ಬೆಂಬಲಿಸಲೆಂದೇ ಈ ಯೋಜನೆ ತರಲಾಗಿದೆ. ಪ್ರಧಾನ ಮಂತ್ರಿ ಸ್ವನಿಧಿ ಯೋಜನೆಯಡಿ ರೂ.10,000 ಸಾಲವನ್ನು ಪಡೆಯಬಹುದು. ಬೀದಿಬದಿ ವ್ಯಾಪಾರಿಗಳು, ಮೊಟ್ಟೆ ಮಾರಾಟಗಾರರು, ಹಣ್ಣು ಮಾರಾಟಗಾರರು, ತರಕಾರಿ ಮಾರಾಟಗಾರರು, ಕ್ಷೌರಿಕ ಅಂಗಡಿಗಳು ಮುಂತಾದವರು ಈ ಯೋಜನೆಯಡಿ ಸಾಲಕ್ಕೆ ಅರ್ಜಿ ಸಲ್ಲಿಸಬಹುದು.




ಅಗತ್ಯ ದಾಖಲೆಗಳು

ಪ್ರಧಾನ ಮಂತ್ರಿ ಸ್ವಾನಿಧಿ ಯೋಜನೆಯಡಿ ಸಾಲ ಪಡೆಯಲು ಬಯಸುವವರು ಈ ಕೆಳಗಿನ ದಾಖಲೆಗಳನ್ನು ಹೊಂದಿರಬೇಕು.

- ಆಧಾರ್ ಕಾರ್ಡ್
- ನಗರ ಸ್ಥಳೀಯ ಸಂಸ್ಥೆಗಳು ನೀಡಿದ ವೆಂಡಿಂಗ್ ಪ್ರಮಾಣಪತ್ರ ಅಥವಾ ಗುರುತಿನ ಚೀಟಿ
- ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಲಾದ ಮೊಬೈಲ್ ಸಂಖ್ಯೆ ನಿಖರವಾಗಿರಬೇಕು
- ನಿಮ್ಮ ಬಳಿ ಗುರುತಿನ ಚೀಟಿ ಇಲ್ಲದಿದ್ದರೆ, ಪಟ್ಟಣ ಮಾರಾಟ ಸಮಿತಿ ಅಥವಾ ನಗರ ಸ್ಥಳೀಯ ಸಂಸ್ಥೆಗಳಿಂದ ಶಿಫಾರಸು ಪತ್ರ ತೆಗೆದುಕೊಂಡರೆ ಸಾಕು.

**ಯೋಜನೆಯ ಪ್ರಯೋಜನಗಳೇನು :** ಪ್ರಧಾನಮಂತ್ರಿ ಸ್ವನಿಧಿ ಯೋಜನೆಯಡಿ ಸಾಲಗಾರನು ಸಾಲದ ಮೊತ್ತವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿಸಿದರೆ, ನಂತರ ಅವರು ಹೆಚ್ಚುವರಿ ಪ್ರಯೋಜನ ಪಡೆಯುತ್ತಾರೆ. ಬಡ್ಡಿದರದಲ್ಲಿ ಶೇ.7 ರಷ್ಟು ಸಬ್ಸಿಡಿ ದೊರೆಯುತ್ತದೆ. ಡಿಜಿಟಲ್ ವಹಿವಾಟಿನ ಮೂಲಕ ಮಾಡಿದ ಪಾವತಿಗಳ ಮೇಲೆ ವಾರ್ಷಿಕ ರೂ.1200/– ವರೆಗೆ ಕ್ಯಾಶ್‌ಬ್ಯಾಕ್ ಇರುತ್ತೆ. ಆದರೂ ಮತ್ತೆ ಸಾಲ ತೆಗೆದುಕೊಳ್ಳಬೇಕಾದರೆ, ರೂ.20,000ದವರೆಗೆ ಸಾಲ ಲಭ್ಯವಿದೆ. ಬಡ್ಡಿ ರಿಯಾಯಿತಿ ಮತ್ತು ಕ್ಯಾಶ್‌ಬ್ಯಾಕ್ ಜೊತೆಗೆ, ನೀವು ರೂ. 10,000 ಸಾಲದ ಮೇಲೆ ರೂ. 1602 ವರೆಗೆ ರಿಯಾಯಿತಿ ಪಡೆಯಬಹುದು.

## ನಿಮ್ಮ ಪ್ರಶ್ನೆ ನಮ್ಮ ಉತ್ತರ






▸▸ **ಸುಧಾಕರ್ ಭಟ್,** ಬ್ಯಾಂಕಿಂಗ್ ಸಲಹೆಗಾರರು.

**01. ಕರ್ನಾಟಕದಲ್ಲಿರುವ ಸಹಕಾರ ಸಂಸ್ಥೆಗಳು ಮತ್ತು ಪಟ್ಟಣ ಸಹಕಾರ ಬ್ಯಾಂಕುಗಳು ಇನ್ನೊಂದು ಪಟ್ಟಣ ಸಹಕಾರ ಬ್ಯಾಂಕಿನ ಷೇರು ಖರೀದಿಸಿ ಆ ಬ್ಯಾಂಕನ್ನು ಬಲಪಡಿಸಬೇಕು ಎಂದು ನಮಗೆ ಸಲಹೆ / ಸೂಚನೆ ಬಂದಿದೆ. ಪಟ್ಟಣ ಸಹಕಾರ ಬ್ಯಾಂಕುಗಳು ಸಹಕಾರ ಸಂಘಗಳಿಂದ ಷೇರು ಸಂಗ್ರಹ ಮಾಡಬಹುದೇ?**

**– ಪಟ್ಟಣ ಸಹಕಾರ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ಸಹಕಾರ ಸಂಘಗಳು ಬ್ಯಾಂಕಿಂಗ್ ವ್ಯವಹಾರ ಮಾಡಲು ಭಾರತೀಯ ರಿಜರ್ವ್ ಬ್ಯಾಂಕಿನ ಪರವಾನಗಿ ಪಡೆಯುವುದು ಕಡ್ಡಾಯವಾಗಿದೆ. ಸಹಕಾರ ಸಂಘಗಳಿಗೆ ಅನ್ವಯವಾಗುವ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಎಲ್ಲಾ ಅಧಿನಿಯಮಗಳನ್ನು ಚಾಚೂ ತಪ್ಪದೇ ಪಾಲಿಸುವುದು ಪಟ್ಟಣ ಸಹಕಾರ ಬ್ಯಾಂಕುಗಳಿಗೆ ಅನಿವಾರ್ಯ. ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಕಲಂ 5(೧)(ಛಿಛಿತ)(ಋ)ರಲ್ಲಿ ತಿಳಿಸಿರುವಂತೆ ಒಂದು ಸಂಸ್ಥೆಯನ್ನು ಪ್ರಾಥಮಿಕ ಸಹಕಾರ ಬ್ಯಾಂಕ್ (ಪಟ್ಟಣ ಸಹಕಾರ ಬ್ಯಾಂಕ್) ಎಂದು ಕರೆಯಲು ಆ ಸಂಸ್ಥೆಯ ಉಪವಿಧಿಯಲ್ಲಿ ಬೇರೆ ಯಾವುದೇ ಸಹಕಾರ ಸಂಘಕ್ಕೆ ತನ್ನ ಸದಸ್ಯನನ್ನಾಗಿ ಪ್ರವೇಶ ನೀಡಲು ನಿಷೇಧವಿರಬೇಕು. ಅದರಂತೆ, ಮಹಾಮಂಡಳ ತಯಾರಿಸಿದ ಮಾದರಿ ಉಪವಿಧಿ ಸಂಖ್ಯೆ:16(2)ರಲ್ಲಿ "ಸಹಕಾರ ಕಾಯ್ದೆ ರೀತ್ಯ ನೋಂದಾಯಿಸಲ್ಪಟ್ಟಿರುವ ಯಾವುದೇ ಸಹಕಾರ ಸಂಘವು ಬ್ಯಾಂಕಿನ ಸದಸ್ಯತ್ವ ಪಡೆಯಲು ಅರ್ಹನಾಗಿರತಕ್ಕದ್ದಲ್ಲ" ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ. ಆದ್ದರಿಂದ, ಪಟ್ಟಣ ಸಹಕಾರ ಬ್ಯಾಂಕುಗಳು ಸಹಕಾರ ಸಂಘಗಳನ್ನು ತನ್ನ ಸದಸ್ಯರನ್ನಾಗಿ ಮಾಡಿ ಷೇರು ಸಂಗ್ರಹಿಸಿದರೆ ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆಯ ಉಲ್ಲಂಘನೆಯಾಗುವುದಲ್ಲದೆ, ರಿಜರ್ವ್ ಬ್ಯಾಂಕು ತೀವ್ರ ಕ್ರಮಕೈಗೊಳ್ಳುವ ಸಂಭವವಿದೆ.

**02. ಬ್ಯಾಂಕಿನ ಆಡಳಿತ ಮಂಡಳಿಯ ಅಥವಾ ಯಾವುದೇ ನಿರ್ದೇಶಕರ ಉಪಸಮಿತಿ ಸದಸ್ಯರು ಬ್ಯಾಂಕಿನ ಸದಸ್ಯರಾಗುವುದು ಕಡ್ಡಾಯ. ಹೀಗಿರುವಾಗ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ (ಬಿಒಎಂ)ನ ಸದಸ್ಯರು ಬ್ಯಾಂಕಿನ ಸದಸ್ಯರಾಗಿರುವುದು ಅನಿವಾರ್ಯವೇ?**

**– ಮಲ್ಲೇಶ್ವರಂ ಕೋ-ಆಪರೇಟಿವ್ ಬ್ಯಾಂಕ್ ಲಿ., ಬೆಂಗಳೂರು.**

**ಉತ್ತರ :** ರಿಜರ್ವ್ ಬ್ಯಾಂಕಿನ ಡಿಸೆಂಬರ್ 31, 2019ರ ಸುತ್ತೋಲೆಯಲ್ಲಿ ಬಿಒಎಂನ ಸದಸ್ಯನಾಗಲು ವ್ಯಕ್ತಿ ಬ್ಯಾಂಕಿನ ಸದಸ್ಯರಾಗಿರಬೇಕು ಎಂದು ನಿರ್ದಿಷ್ಟವಾಗಿ ಹೇಳಿಲ್ಲ. ಮತ್ತೊಂದೆಡೆ, ಸುತ್ತೋಲೆಯ ಪ್ಯಾರಾ 6(೨ತ) ಒಬ್ಬ ವ್ಯಕ್ತಿಗೆ ಒಂದುಕ್ಕಿಂತ ಹೆಚ್ಚು ಬ್ಯಾಂಕುಗಳಲ್ಲಿ ಬಿಒಎಂನ ಸದಸ್ಯನಾಗಲು ಅನುಮತಿ ನೀಡುತ್ತದೆ. ಆದರೆ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯ ಕಲಂ 17 (ಡಿ)ಯಂತೆ ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚು ಸಹಕಾರ ಬ್ಯಾಂಕಿನಲ್ಲಿ ಸದಸ್ಯನಾಗುವಂತಿಲ್ಲ. ಆದ್ದರಿಂದ, ಬಿಒಎಂನ ಸದಸ್ಯರಾಗಲು ಒಬ್ಬ ವ್ಯಕ್ತಿಯು ಆ ಬ್ಯಾಂಕಿನ ಸದಸ್ಯರಾಗಬೇಕಾಗಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲಿ ನೆನಪಿಡಬೇಕಾದ ವಿಷಯವೆಂದರೆ ಬ್ಯಾಂಕಿನ ವೃತ್ತಿಪರ ನಿರ್ದೇಶಕರು ಕೂಡಾ ಬ್ಯಾಂಕಿನ ಸದಸ್ಯರಾಗಿರುವುದು ಅನಿವಾರ್ಯವಲ್ಲ.

## ಒಂದಕ್ಕಿಂತ ಹೆಚ್ಚು ಬ್ಯಾಂಕುಗಳಲ್ಲಿ ಖಾತೆ ಹೊಂದಿದ್ದರೆ ಕೂಡಲೇ ಕ್ಲೋಸ್ ಮಾಡಿ

ನಿಷ್ಕ್ರಿಯ ಖಾತೆಯನ್ನು ಸರಿಯಾಗಿ ಬಳಸದಿದ್ದರೆ ಅದು ನಿಮಗೆ ನಷ್ಟವಾಗುತ್ತದೆ. ಬ್ಯಾಂಕ್ ನಿಮಗೆ ದಂಡ ವಿಧೀಸುವುದರಿಂದ ಹಣ ಕಳೆದುಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೆ. ಉದಾಹರಣೆಗೆ, ಒಬ್ಬ ವ್ಯಕ್ತಿ 4 ಬ್ಯಾಂಕ್ ಖಾತೆಗಳನ್ನು ಹೊಂದಿದ್ದರೆ, ಕನಿಷ್ಠ 10 ಸಾವಿರ ಹಣವನ್ನು ಖಾತೆಯಲ್ಲಿ ಇಡಬೇಕಾಗುತ್ತದೆ.

ನೀವು ಒಂದಕ್ಕಿಂತ ಹೆಚ್ಚು ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿದ್ದರೆ, ತುಂಬಾ ಸಮಯದಿಂದ ಆ ಖಾತೆಯನ್ನು ಬಳಸದಿದ್ದರೆ ಕೂಡಲೇ ಆ ಅಕೌಂಟ್‌ನ್ನು ಕ್ಲೋಸ್ ಮಾಡಿಸಬೇಕಾಗುತ್ತದೆ. ಒಂದು ವೇಳೆ, ಅಕೌಂಟ್ ಕ್ಲೋಸ್ ಮಾಡಿಸದಿದ್ದರೆ, ಬ್ಯಾಂಕ್‌ಗೆ ನೀವು ಹೆಚ್ಚಿನ ಮೊತ್ತದ ಹಣ ಪಾವತಿಸಬೇಕಾಗುತ್ತದೆ. ಈ ಬಗ್ಗೆ ಬ್ಯಾಂಕ್ ಗ್ರಾಹಕರು ತಿಳಿದುಕೊಳ್ಳಬೇಕಾದ ಹೆಚ್ಚಿನ ಅಂಶಗಳು ಇಲ್ಲಿವೆ.




ನಿಮ್ಮ ಹೆಸರಿನಲ್ಲಿ ಬ್ಯಾಂಕ್ ಖಾತೆ ಇದ್ದು, ಅದನ್ನು ನೀವು ತುಂಬಾ ದಿನಗಳಿಂದ ಬಳಸದಿದ್ದರೆ, ಈಗ ಆ ಖಾತೆಯನ್ನು ಮುಚ್ಚುವುದು ಉತ್ತಮ. ಬ್ಯಾಂಕ್‌ನ ನಿಯಮದ ಪ್ರಕಾರ, ಗ್ರಾಹಕ ತನ್ನ ಖಾತೆಯಲ್ಲಿ ಕನಿಷ್ಠ ಹಣವನ್ನು ಇಟ್ಟು, ನಿಯಮಿತವಾಗಿ ಹಣ ವ್ಯವಹಾರ ಮಾಡಬೇಕು. ಇಲ್ಲವಾದರೆ ಬ್ಯಾಂಕ್ ನಿಮಗೆ ಹೆಚ್ಚಿನ ದಂಡ ವಿಧಿಸುತ್ತದೆ.

ಹೀಗಾಗಿ, ಬ್ಯಾಂಕ್ ಖಾತೆಯನ್ನು ನಿಷ್ಕ್ರಿಯೆಗೊಳಿಸಿ ಎಂದು ಪರಿಣಿತರು ಸಲಹೆ ನೀಡಿದ್ದಾರೆ. ನಿಮ್ಮ ಬ್ಯಾಂಕ್ ಖಾತೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಜೊತೆ ಕೂಡಲೇ ಬ್ಯಾಂಕ್‌ಗೆ ಹೋಗಿ ಖಾತೆಯನ್ನು ಕ್ಲೋಸ್ ಮಾಡಿಸುವುದು ಒಳಿತು. ಯಾಕೆಂದರೆ, ನಿಮ್ಮ ಎಲ್ಲಾ ಹೂಡಿಕೆಗಳು, ಸಾಲ, ವ್ಯಾಪಾರ, ಕ್ರೆಡಿಟ್ ಕಾರ್ಡ್ ಪೇಮೆಂಟ್ ಮತ್ತು ವಿಮೆ (ಇನ್ಶೂರೆನ್ಸ್) ಯೊಂದಿಗೆ ಸಂಪರ್ಕ ಹೊಂದಿರುವ ಪೇಮೆಂಟ್‌ಗಳನ್ನು ಬ್ಯಾಂಕ್ ಖಾತೆಯೊಂದಿಗೆ ಲಿಂಕ್ ಮಾಡಲಾಗಿರುತ್ತದೆ.

**ನಿಮ್ಮ ಬ್ಯಾಂಕ್ ಖಾತೆಯನ್ನು ಕ್ಲೋಸ್ ಮಾಡುವುದು ಹೇಗೆ? :** ಇಂದಿನ ದಿನಗಳಲ್ಲಿ ಜನರು ತಮ್ಮ ವೈಯಕ್ತಿಕ ಹಾಗೂ ಮತ್ತಿತರ ಕಾರಣಗಳಿಂದ ಆಗಾಗ್ಗೆ ತಮ್ಮ ಉದ್ಯೋಗಗಳನ್ನು ಬದಲಾಯಿಸುತ್ತಾರೆ. ಪ್ರತಿಯೊಂದು ಕಂಪನಿಯು ತನ್ನದೇಯಾದ ನಿಯಮ ಹಾಗೂ ಷರತ್ತುಗಳನ್ನು ಹೊಂದಿರುತ್ತದೆ. ಹೊಸ ಕಂಪನಿಗೆ ಕೆಲಸಕ್ಕೆಂದು ಹೋದಾಗ ಅಲ್ಲಿನ ಷರತ್ತುಗಳಿಗೆ ಅನುಗುಣವಾಗಿ ಬ್ಯಾಂಕ್ ಖಾತೆ ತೆರೆಯಬೇಕಾಗುತ್ತದೆ. ಈ ವೇಳೆ, ನೀವು ಹಿಂದಿನ ಸಂಸ್ಥೆಯಲ್ಲಿ ಬಳಸುತ್ತಿದ್ದ ಸ್ಯಾಲರಿ ಅಕೌಂಟ್ (ಸಂಬಳ ಖಾತೆ) ನಿಷ್ಕ್ರಿಯಗೊಳ್ಳುತ್ತದೆ. ಸಂಬಳ ಬರುವುದು ನಿಂತಾಗ, ಅದು ಸೇವಿಂಗ್ಸ್ ಅಕೌಂಟ್ (ಉಳಿತಾಯ ಖಾತೆ) ಆಗಿ ಮಾರ್ಪಡುತ್ತದೆ. ಯಾವಾಗ ಖಾತೆಯ ಸ್ವರೂಪ ಬದಲಾಗುತ್ತದೋ, ಆಗ ಬ್ಯಾಂಕಿನ ನಿಯಮಗಳು ಕೂಡ ಬದಲಾಗುತ್ತವೆ. ಈ ನಿಯಮಗಳ ಪ್ರಕಾರ, ಗ್ರಾಹಕರು ತಮ್ಮ ಖಾತೆಯಲ್ಲಿ ಕನಿಷ್ಠ ಮೊತ್ತದ ಹಣ ಇಟ್ಟು, ಖಾತೆಯನ್ನು ಜೀವಂತವಾಗಿಡಬೇಕು. ಹೀಗೆ ಮಾಡಲು ನೀವು ವಿಫಲವಾದರೆ, ಬ್ಯಾಂಕ್ ನಿಮ್ಮ ಖಾತೆಯಲ್ಲಿನ ಹಣವನ್ನು ಕಡಿತಗೊಳಿಸುವ ಮೂಲಕ ದಂಡ ವಿಧಿಸಲು ಪ್ರಾರಂಭಿಸುತ್ತದೆ. ಒಂದಕ್ಕಿಂತ ಹೆಚ್ಚಿನ ಬ್ಯಾಂಕ್ ಖಾತೆಗಳನ್ನು ಹೊಂದಿದ್ದರೆ, ಆದಾಯ ತೆರಿಗೆ ಸಲ್ಲಿಸುವಾಗ(ಐಟಿ ರಿಟನ್) ನಿಮ್ಮನ್ನು ತೊಂದರೆಗೆ ಸಿಲುಕಿಸುತ್ತದೆ. ನೀವು ಎಲ್ಲಾ ಖಾತೆಗಳ ಪ್ರತಿಯೊಂದು ವಿವರವನ್ನು ತಪ್ಪದೇ ನೀಡಬೇಕಾಗುತ್ತದೆ. ಐಟಿ ರಿಟನ್ ಸಲ್ಲಿಸುವ ವೇಳೆ, ಎಲ್ಲಾ ಅಕೌಂಟ್‌ಗಳ ಸ್ಟೇಟ್‌ಮೆಂಟ್ಸ್‌ನ್ನು ಕೂಡ ನೀಡಬೇಕಾಗುತ್ತದೆ. ಇದು ನಿಮನ್ನು ಮತ್ತಷ್ಟು ತೊಂದರೆಗೆ ಸಿಲುಕಿಸುತ್ತದೆ.



## ಓನ್‌ಲೈನ್ ನ್ಯೂಸ್

ಈ ಪುಟದಲ್ಲಿನ ಸುದ್ದಿಗಳನ್ನು ಓದಿದ್ದೀರಾ...?
**ಕುತೂಹಲಕಾರಿಯಾದ ಸುದ್ದಿಗಳು** ನಿಮ್ಮ ಕಣ್ಣು ತಪ್ಪಿದ್ದರೆ, ಇಲ್ಲಿವೆ ಓದಿ.

- ಪಾವಗಡ ತಾಲೂಕಿನಲ್ಲಿ ಖಾಸಗಿ ಬಸ್ಸೊಂದು ಮಗುಚಿ ಬಿದ್ದ ಪರಿಣಾಮ ಇಬ್ಬರು ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಕನಿಷ್ಠ ಐವರು ಮೃತಪಟ್ಟು ಮೂವತ್ತೈದು ಮಂದಿ ಗಾಯಗೊಂಡಿರುವ ಘಟನೆ ನಡೆದಿದೆ.
- ಉಕ್ರೇನ್‌ನಲ್ಲಿ ಇತ್ತೀಚೆಗೆ ಮೃತಪಟ್ಟ ವೈದ್ಯಕೀಯ ವಿದ್ಯಾರ್ಥಿ ನವೀನ್ ಶೇಖರಪ್ಪ ಗ್ಯಾನಗೌಡರ್ ಮೃತದೇಹವನ್ನು ವೈದ್ಯಕೀಯ ಕಾಲೇಜಿಗೆ ದಾನ ಮಾಡಲಾಗುವುದು ಎಂದು ಅವರ ತಂದೆ ಶೇಖರಪ್ಪ ತಿಳಿಸಿದ್ದಾರೆ.
- ಮಿದುಳು ನಿಷ್ಕ್ರಿಯಗೊಂಡಿದ್ದ ಬೆಳಗಾವಿಯ ಉಮೇಶ ಬಸವಣ್ಣಿ ದಂಡಗಿ ಅವರ ಅಂಗಾಗ ದಾನದಿಂದ ನಾಲ್ವರ ಜೀವ ಉಳಿದು, ಇಬ್ಬರು ಅಂಧರ ಬಾಳು ಬೆಳಕಾಗಿದೆ.
- ಉಕ್ರೇನ್‌ನಿನ ಮರಿಯುಪೋಲ್ ನಗರದ ರಂಗ ಮಂದಿರದ ಮೇಲೆ ರಷ್ಯಾ ನಡೆಸಿದ ಬಾಂಬ್ ದಾಳಿಯಲ್ಲಿ 1300ಕ್ಕೂ ಹೆಚ್ಚು ಜನರು ಅವಶೇಷಗಳಡಿ ಸಿಲುಕಿದ್ದಾರೆಂದು ತಿಳಿದುಬಂದಿದೆ.
- ಪಶ್ಚಿಮ ಬಂಗಾಳದ ಹಸ್ಲು ಮೊಹಮ್ಮದ್ ತನ್ನ ಹಿಂದೂ ಸಹೋದ್ಯೋಗಿಯ ಜೀವ ಉಳಿಸಲು ತನ್ನ ಒಂದು ಕಿಡ್ನಿ ದಾನ ಮಾಡಲು ಮುಂದಾಗಿದ್ದಾನೆ.
- ಜಾರ್ಖಂಡ್‌ನ ಹಳ್ಳಿಯೊಂದರಲ್ಲಿ ಮಕ್ಕಳು ಶಾಲೆ ತಲುಪಲು ಅಡ್ಡಿಯಾಗಿದ್ದ ನದಿಗೆ ಗ್ರಾಮಸ್ಥರು ಹಣ ಸಂಗ್ರಹಿಸಿ ಬಿದಿರಿನ ಸೇತುವೆ ನಿರ್ಮಿಸಿದ್ದಾರೆ.
- ಫಿನ್ಲ್ಯಾಂಡ್ ವಿಶ್ವದ ಅತ್ಯಂತ ಸಂತೋಷಭರಿತ ರಾಷ್ಟ್ರವಾಗಿ ಶ್ರೇಯಾಂಕದಲ್ಲಿ ಅಗ್ರಸ್ಥಾನದಲ್ಲಿದ್ದರೆ, ಭಾರತ 139ನೇ ಸ್ಥಾನದಲ್ಲಿದೆ ಹಾಗೂ ನೆರೆಯ ರಾಷ್ಟ್ರ ಪಾಕಿಸ್ತಾನ ನಮಗಿಂತಲೂ ಮೇಲಿನ ಸ್ಥಾನದಲ್ಲಿದೆ.
- ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ನೆರೆಯ ಶ್ರೀಲಂಕಾಗೆ ಆಹಾರ, ಔಷಧ ಹಾಗೂ ಇನ್ನಿತರ ಅಗತ್ಯ ವಸ್ತುಗಳನ್ನು ಖರೀದಿಸಲು 1 ಬಿಲಿಯನ್ ಡಾಲರ್ ಆರ್ಥಿಕ ನೆರವನ್ನು ನೀಡಲಿದೆ.

## ಓ ದು ಗ ರ ಅ ನಿ ಸಿ ಕೆ . . .




**ಸೈಬರ್ ವಂಚಕರಿಗೆ ಕಡಿವಾಣ:** ಇನ್ಮುಂದೆ ಸೈಬರ್ ವಂಚಕರು ಖಾತೆಗೆ ಕನ್ನ ಹಾಕಿದ, 20 ನಿಮಿಷಗಳಲ್ಲಿ ಆ ಹಣ ನಮ್ಮ ಖಾತೆಗೆ ಮರಳಿ ಬರಲಿದೆ. ಇದು ಸಾಧ್ಯವಾಗಿರುವುದು ನಮ್ಮ ಹುಬ್ಬಳ್ಳಿಯಲ್ಲಿ ಅಸ್ತಿತ್ವಕ್ಕೆ ಬಂದಿರುವ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲದಿಂದ. ಸೈಬರ್ ಅಪರಾಧಗಳನ್ನು ತಡೆಯಲು ಶುರುಮಾಡಿರುವ ಸಂಖ್ಯೆ 112ಗೆ ಹಣ ಕಳೆದುಕೊಂಡವರು ಕರೆ ಕೂಡಲೆ ಹಣ ಹಿಂದಿರುಗಿ ಪಡೆಯಲು ಸಾಧ್ಯವಾಗಲಿದೆ ಎಂದು ತಿಳಿದು ಸಂತೋಷವಾಯಿತು. «« **ಬಸವರಾಜಪ್ಪ ಹಿರೇಮಠ, ಧಾರವಾಡ**

**ರೂಪಾಯಿ ಬೆಲೆ ಕುಸಿತ**

ಡಾಲರ್ ಎದುರಿನ ರೂಪಾಯಿ ಕುಸಿತದಿಂದ ದೇಶದ ಆರ್ಥಿಕ ಬೆಳವಣಿಗೆಗೆ ಧಕ್ಕೆಯಾಗುವುದು ಮಾತ್ರವಲ್ಲ, ಹಣದುಬ್ಬರ ಹೆಚ್ಚಳಕ್ಕೂ ಕಾರಣವಾಗಲಿದೆ. ದೇಶದ ವ್ಯಾಪಾರ ಮತ್ತು ಚಾಲ್ತಿ ಖಾತೆ ಕೊರತೆಯನ್ನು ಹೆಚ್ಚಿಸುತ್ತದೆ. ಪ್ರಸ್ತುತ ರೂಪಾಯಿ ಮೌಲ್ಯ ಪಾತಾಳಕ್ಕೆ ಇಳಿದಿದ್ದು, ಮುಂದಿನ ದಿನಗಳಲ್ಲಿ ರೂಪಾಯಿ ಇನ್ನಷ್ಟು ದುರ್ಬಲವಾದಲ್ಲಿ ದೇಶದ ಜನತೆಯ ಪಾಲಿಗೆ ಆಘಾತಕರವಾಗಲಿದೆ.

«« **ಕೆ. ನರಸಿಂಹಮೂರ್ತಿ, ಮೈಸೂರು**

ಸಂಪಾದಕರು :
**ಪುಂಡಲೀಕ ಎನ್. ಕೇರೂರೆ,**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳ ನಿ.,
ಬೆಂಗಳೂರು.

**ಇವರಿಗೆ,**

Edited, Published and printed by Pundalik N. Kerure, C.E.O. on behalf of the
Karnataka State Co-operative Urban Banks Federation Ltd., Bangalore - 560027.
Published at : # 132, K.H. Road, Bangalore - 560027.
Printed at : Navarathna Printers, # 35, 3rd Cross, Sudhamanagar, Bangalore – 560027.